**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.1123/2024**

| | | |
|---|---|---|
| ಸಾಕ್ಷಿದಾರರ ಹೆಸರು | : ಲಕ್ಷ್ಮಣಗೌಡ | ಪ್ರಾಸಾ-9 |
| ತಂದೆಯ ಹೆಸರು | : ಎಸ್.ಟಿ. ಪುಟ್ಟೆಗೌಡ | ಚಾಸಾ-12 |
| ವಯಸ್ಸು | : 52 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಎ.ಎಸ್.ಐ | ದಿನಾಂಕಃ09.06.2026. |
| ವಾಸಸ್ಥಳ | : ಬಾಳೂರು ಪೋಲಿಸ್ ಠಾಣೆ. | |

**:ಮುಖ್ಯ ವಿಚಾರಣೆಃ ಪ್ರಾಜ್ಞ್ಯಾಸ.ಸ.ಅ. ರವರಿಂದ:**

ನಾನು ದಿನಾಂಕಃ.29.06.2019 ರಿಂದ ದಿ.31.08.2024 ರವರೆಗೂ ಬಣಕಲ್ ಪೋಲಿಸ್ ಠಾಣೆಯಲ್ಲಿ ಹೆಚ್.ಸಿ. ಆಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

ದಿ.29.11.2023 ರಂದು ಬೆ.10.00 ರ ಸಮಯಕ್ಕೆ ಚಾಸಾ-11 ರವರು ಚಾಸಾ-1 ರವರು ನೀಡಿದ ಹೇಳಿಕೆಯನ್ನು ಹಾಜರುಪಡಿಸಿರುತ್ತಾರೆ ಅದನ್ನು ಸ್ವೀಕರಿಸಿಕೊಂಡು, ಠಾಣಾ ಮೊ.ನಂ.120/2023 ರ ಕಲಂ 341, 323, 324, 504 ಮತ್ತು 506 IPC ರೀತ್ಯಾ ಪ್ರಕರಣವನ್ನು ದಾಖಲಿಸಿಕೊಂಡು, ಮುಂದಿನ ತನಿಖೆಗಾಗಿ ಪ್ರಕರಣದ ಕಡತವನ್ನು ಚಾಸಾ-13 ರವರಿಗೆ ಹಸ್ತಾಂತರಿಸಿರುತ್ತೇನೆ ಮಹಜರ್ ಕಾಲದಲ್ಲಿ ಚಾಸಾ-13 ರವರು ಹೇಳಿದಂತೆ ನಿಪಿ-2 ನ್ನು ಬರವಣಿಗೆ ಮಾಡಿರುತ್ತೇನೆ. ನಂತರ ಚಾಸಾ-13 ರವರ ನಿರ್ದೇಶನದಂತೆ ಚಾಸಾ-5 ಮತ್ತು 6 ರವರ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ಮಹಜರ್ ಸಮಯದಲ್ಲಿ ಫೋಟೋವನ್ನು ತೆಗೆದು ಸಿಡಿ ಮಾಡಿದ ಬಾಬ್ತು ಕಲಂ 65 ಬಿ ರಡಿಯ ದೃಢೀಕೃತ ಪ್ರತಿಯನ್ನು ಚಾಸಾ-13 ರವರಿಗೆ ಹಸ್ತಾಂತರಿಸಿರುತ್ತೇನೆ.

ಸಾಕ್ಷಿಯು ನಿಪಿ-1 ಮತ್ತು 12 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1(ಬಿ) ಮತ್ತು ನಿಪಿ-12(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ದಿ.28.11.2023 ರಂದು ದಾಖಲಿಸಿದ ಪ್ರಥಮ ವರ್ತಮಾನ ವರದಿಯಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಪ್ರಥಮ ವರ್ತಮಾನ ವರದಿಯನ್ನು ನಿಪಿ-14, ಸಾಕ್ಷಿಯ ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ಎಂ.ಆ. ವಕೀಲರಿಂದಃ**

ದಿ.29.11.2023 ರಂದು ಠಾಣಾ SHO ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಸಾಮಾನ್ಯವಾಗಿ ನಾವು ಹೇಳಿಕೆಗಳನ್ನು ಪಡೆದುಕೊಂಡರೆ ನಮ್ಮ ದಿನಚರಿಯಲ್ಲಿ ನಮೂದಿಸುತ್ತೇವೆ ಎಂದರೆ ಸರಿಯಲ್ಲ. ನಾನು ಪಡೆದುಕೊಂಡ ಹೇಳಿಕೆಗಳಲ್ಲಿ ಯಾವುದೇ ತಿದ್ದುಪಡಿಯನ್ನು ಮಾಡಿರುವುದಿಲ್ಲ. ನಿಪಿ-1 ರಲ್ಲಿ ತಿದ್ದುಪಡಿಯಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ-1 ರ ಒಂದನೇ ಪುಟದಲ್ಲಿ ತಂದೆಯೊಂದಿಗೆ ಎಂದು ಸೇರಿಸಲಾಗಿರುತ್ತದೆ ಎಂದರೆ ಸರಿ. ಅದೇ ರೀತಿಯಾಗಿ ಅದರಲ್ಲಿ

ದಿನಾಂಕವನ್ನು ತಿದ್ದುಪಡಿ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ದಾಖಲಾತಿಗಳಲ್ಲಿ ತಿದ್ದುಪಡಿಯಾದರೆ ಕಿರುಸಹಿಯನ್ನು ಪಡೆದುಕೊಳ್ಳುತ್ತೇವೆ ಎಂದರೆ ಸರಿ. ನಿಪಿ-1 ರಲಿ ತಿದ್ದುಪಡಿಯಾಗಿದ್ದರೂ ಸಹಾ ಕಿರು ಸಹಿ ಪಡೆಯದ ಕಾರಣ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಇಲಾಖಾ ಅಂಕಿ ಅಂಶಕ್ಯೋಸ್ಕರ ನಿಪಿ-14 ನ್ನು ದಾಖಲಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಿ.29.11.2023 ರಂದು ಮಹಜರ್ ನ್ನು ಜರುಗಿಸಲಾಗಿರುತ್ತದೆ. ಆ ದಿನ ಠಾಣೆಯಿಂದ ಎಷ್ಟು ಸಮಯಕ್ಕೆ ಹೊರಟಿರುತ್ತೇವೆ ಎಂದು ಈಗ ನೆನಪಾಗುತ್ತಿಲ್ಲ. ಆ ದಿನ ನನ್ನೊಟ್ಟಿಗೆ ನಾನು ಮತ್ತು ಚಾಸಾ-13 ರವರು ಮಹಜರ್ ಕ್ರಮ ಜರುಗಿಸಲು ಹೊರಟಿರುತ್ತೇವೆ. ಮಹಜರ್ ಕ್ರಮವನ್ನು ಸ.5.00 ರ ಸಮಯಕ್ಕೆ ಪ್ರಾರಂಭಿಸಿರುತ್ತೇವೆ.

ಮಹಜರ್ ಕಾಲದಲ್ಲಿ ಇಲಾಖಾ ಕ್ಯಾಮೆರಾದಲ್ಲಿ ನಾನು ಫೋಟೋವನ್ನು ತೆಗೆದಿರುತ್ತೇನೆ. ಸದರಿ ಸಮಯದಲ್ಲಿ ರಕ್ತದ ಕಲೆಗಳು ಇದ್ದ ಬಗ್ಗೆ ಈಗ ನೆನಪಾಗುತ್ತಿಲ್ಲ. ನಾವು ಹೋಗುವ ಪೂರ್ವದಲ್ಲಿಯೇ ಚಾಸಾ-5 ಮತ್ತು 6 ರವರು ಸ್ಥಳದಲ್ಲಿ ಇದ್ದರು. ಮಹಜರ್ ಕಾಲದಲ್ಲಿ ಒಂದು ಕತ್ತಿಯನ್ನು ವಶಕ್ಕೆ ಪಡೆದುಕೊಳ್ಳಲಾಗಿರುತ್ತದೆ. ಸದರಿ ಕತ್ತಿಯನ್ನು ಚಾಸಾ-1 ರವರು ಹಾಜರುಪಡಿಸಿರುತ್ತಾರೆ ಅದು ಎಲ್ಲಿ ಇತ್ತು ಎಂದು ನನಗೆ ಮಾಹಿತಿ ಇರುವುದಿಲ್ಲ. ಎಂ.ಒ.1 ರ ಮೇಲೆ ರಕ್ತದ ಕಲೆ ಇದ್ದ ಬಗ್ಗೆ ಈಗ ನೆನಪಾಗುತ್ತಿಲ್ಲ. ನಿಪಿ-2 ನ್ನು ಠಾಣೆಯಲ್ಲಿ ಸೃಷ್ಟಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಚಾಸಾ-13 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಪರವಾಗಿ ಗುರುತಿಸಿದ ದಾಖಲಾತಿಗಳು ಈ ಪ್ರಕರಣಕ್ಕಾಗಿ ಸೃಷ್ಟಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿಗೂ, ಈ ಪ್ರಕರಣಕ್ಕೂ, ಮುದ್ದೆಮಾಲುಗಳಿಗೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.